ಮೈಸೂರ ಗೆಜಿಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ|| 7, ಸ್ರ್ 1889.

"ಪಾ" ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್ಗೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫೈನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ ಷರಾ ಬರೆಯಲ್ಪಡಬಹುದೂಂಥಾ ಸದರೀ ಸೂಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ರೂಪ್ಟಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಪಡಿಸ್ಕ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖಾ.

ತಾರೀಖು 27ನೇ ಆಗಸ್ಟ್ 1889.

1878ನೇ ಇಸವಿ ಫಾರೆಸ್ಟ್ ರೂಲ್ಸ್ 9ನೇ ಸೆಕ್ಷರ್ಷ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ ಸ್ಟೇಟ್ ಫಾರೆಸ್ಟ್‌ಗೆ ಹೊಸದಾಗಿ ಕೇರಿಸಿಕೊಂಡು 22 ಗಜ ಅಗಲ ಡಿವಾರ್ಕೇರ್ಷ ಲೈನ್ ಮಾಡಿರುವ ದೊಡ್ಡವಾಡೀ ಪಟ್ಟದ ಗುಡಿಗಳು ಸಕಲಜನರ ತಿಳುವಳಿಕೆ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ವೃತ್ತರಕ್ಕೆ.

ಲಿಂಗ್ಯಹಳ್ಳಿ ಗ್ರಾಮದ ಸರ್ವೆ ನಂಬರ್ 21—31—36—39—46 ಮತ್ತು ಬೋವೇನಹಳ್ಳಿ ಗ್ರಾಮದ 48 ಮತ್ತು 49ನೇ ನಂಬರುಗಳು.

ಪೂರ್ವಕ್ಕೆ.

ಚಿಕ್ಕ ದೊಡ್ಡವಾಡೀ ಗ್ರಾಮದ ಸರ್ವೆ 18—22—23—24—25—26—29—34—35 ಮತ್ತು ಹಿರೇದೊಡ್ಡವಾಡೀ ಗ್ರಾಮದ ಸರ್ವೆ 83—85—86—87ನೇ ನಂಬರುಗಳು.

ದಕ್ಷಿಣಕ್ಕೆ.

ಸಾತಗಟ್ಟ ಗ್ರಾಮದ ಸರ್ವೆ 7—8—10—11 ಮತ್ತು ಪೂರ್ದಿಗೆರೆ ಗ್ರಾಮದ ಸರ್ವೆ 127—129—132—119—124—125.

ಪಶ್ಚಿಮಕ್ಕೆ.

ದೇವರಾಯದುರ್ಗ ಫಾರೆಸ್ಟ್ ಡಿಮಾರ್ಕೆರ್ಷ ಲೈನ್ ಮತ್ತು ನಾಗೇನಹಳ್ಳೀ ಗ್ರಾಮದ ಸರ್ವೆ 45—47—51—55—58—59—26—27—28—29—41 ವೆಂಕಟಿನಾಯಕನಪಾಳ್ಯದ ಸರ್ವೆ 1—6—5 ಮತ್ತು ದೊಡ್ಡಬಟ್ಟಲಹಳ್ಳಿ ಗ್ರಾಮದ ಸರ್ವೆ 5—6—9—19—21—22—23—24—29 ಮತ್ತು 30ನೇ ನಂಬರುಗಳು.

ತಾಯಿಪಟ್ಟದ ಸುತ್ತಳತೆ 7¼ ಮೈಲಿಗಳು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇಣೀದಾರ ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರವೆಂಬ ಪಾಳ್ಯ ಗ್ರಾಮದಲ್ಲಿ ಯಿರತಕ್ಕ ಸೊಂಣಕ್ಕನ ವಿಷಯದಲ್ಲಿ—

ಸ್ರ 1889ನೇ ಇಸವಿ ದಿವಾಳಿ ಕೇಸ್ ನಂಬರ್ 369.

ಹುಕುಂ.

ಮೇಲ್ಕಂಡ ಸೊಂಣಕ್ಕನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜರಾದ ಮೆ|| ಅನಂತ ಸ್ವಾಮಿರಾಯರವರ ರೂಬರೂ ಅರ್ಜೀದಾರಳಾದ ಸೊಂಣಕ್ಕನ ಪರವಾಗಿ ಪ್ಲೀಡರ್ ಮೆ|| ಗಂಗಾಧರೈಯ್ಯನವರುನ್ನೂ ಮತ್ತು ಸದರಿ ಯವಳ ಲೇಣೇದ್ರಾದಾದ 2ನೇ ಬೈರಪ್ಪಡ್ಡಿಯನ್ನ ಖುದ್ದಾಗಿಯೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಬಳ್ಳಾರೀ ದೊಡ್ಡಸುಬ್ಬಾ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸೊಂಣಕ್ಕ ಯಂಬುವಳು ಹೊಂದುವ ದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವಳನ್ನು ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇನ್ನ್ಯಾರವಾಗಿಯಾಗಲಿ ವಸ್ತುಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ದೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ರ 1889ನೇ ಇಸವಿ ಜುಲೈ 26ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು, ಅಥವಾ ದಾವಾದಾರ, ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ	ಸಿಕ್ಕುಬಿಗಳು.			ಯಾವಾಗ ಪೂರ್ಣಕ್ಕೆ ಬಂದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಟಿಪ್ಪಣಿ.
1	ಶ್ರೀನಿವಾಸಪುರವೆಂಬ ಪಾಳ್ಯದಲ್ಲಿ ಯಿರುವ ಬಳ್ಳಾರೀ ದೊಡ್ಡಸುಬ್ಬ	50	3	1	1887	ಕೋಲಾರ ಮುನಸಿಫ್ ಕೋರ್ಟು 1887ನೇ ಇಸವಿ ಅರಿಜಿನಲ್ 508ನೇ ಡಿಕ್ರಿ ಮೊಬಲಗು ಮುಬಾದಲೇ ಬಾಬತು	
2	ಚಿಂತಾಮಣಿ ತಾಲ್ಲೂಕು ಬಚ್ಚೇನಹಳ್ಳಿ ಪಟೇಲ ಬೈರಪ್ಪಡ್ಡಿ	25	0	0	..		
		75	3	1			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.